## <u>*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*</u>

*ಎಸ್‌ಸಿ.* **137/2020**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ಪ್ರಿಯಾಂಕ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಪ್ರಶಾಂತ್ | | **18.01.2025** |
| **ವಯಸ್ಸು** | ಃ **31** **ವರ್ಷ** | | |
| **ವೃತ್ತಿ** | ಃ ಸಾಫ್ಟ್ ವೇರ್ ಇಂಜಿನಿಯರ್ | **ಪ್ರಾ.ಸಾ.** | ಃ **09** |
| **ವಾಸಸ್ಥಳ** | ಃ ಬೆಂಗಳೂರು | **ಚಾ.ಸಾ.** | ಃ **15** |

**<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>**

. ಮೃತ ನಾಗರತ್ನ ಇವರು ನನಗೆ ಅಜ್ಜಿಯಾಗಬೇಕು. ದಿಃ*21.08.2019* ರಂದು ಬೆಳಗ್ಗೆ *8.30* ಕ್ಕೆ ನನ್ನ ಅಜ್ಜಿ ನಾಗರತ್ನ ಇವರು ಚಾಮರಾಜಪುರಂ ಕೋರ್ಟ್ ಹತ್ತಿರ ಮನೆ ಸಂಖ್ಯೆ *1079* ಮನೆಯಲ್ಲಿರುವಾಗ ಯಾರೋ ಒಬ್ಬ ವ್ಯಕ್ತಿ ಹೆಲ್ಮೆಟ್ ಹಾಕಿಕೊಂಡು ಮನೆ ಒಳಗಡೆ ಬಂದು ಅವರ ಬಾಯಿಗೆ ಬಟ್ಟೆ ತುರುಕಿ ಅವರ ಕೈ ಯಲ್ಲಿದ್ದ ಬಳೆಗಳನ್ನು ಕಿತ್ತುಕೊಂಡು ಹೋಗಿದ್ದ ಎಂದು ಆ ದಿನ ಮದ್ಯಾಹ್ನ ನನಗೆ ಫೋನ್ ಮಾಡಿ ನನ್ನ ಅಜ್ಜಿ ನಾಗರತ್ನ ಇವರೇ ಹೇಳಿದ್ದರು ಆ ಕಾಲಕ್ಕೆ ನಾನು ಬೆಂಗಳೂರಿನಲ್ಲಿದ್ದೆ. ಆ ಕಾಲಕ್ಕೆ ನಾನು ಮೈಸೂರಿಗೆ ಬರಲಿಲ್ಲ. ನಂತರ ದಿಃ*23.08.2019* ರಂದು ನನ್ನ ಅಜ್ಜಿ ನಾಗರತ್ನ ಇವರು ಆಸ್ಪತ್ರೆಯಲ್ಲಿ ಮರಣಹೊಂದಿದ್ದರು. ಅವರು ಮರಣಹೊಂದಿದ್ದ ಬಳಿಕ ನಾನು ಮೈಸೂರಿಗೆ ಬಂದಿದ್ದೆ. ಅವರಿಗೆ ಆ ವ್ಯಕ್ತಿ ಬಟ್ಟೆ ತುರುಕಿದ್ದರಿಂದ ಅವರಿಗೆ ಉಸಿರಾಟದ ತೊಂದರೆಯಾಗಿ ಆಸ್ಪತ್ರೆಗೆ ದಾಖಲಾಗಿದ್ದರು ಅದೇ ಕಾರಣಕ್ಕೆ ಅವರು

ಮರಣಹೊಂದಿದ್ದರು. ಆ ಘಟನೆ ದಿನ ನನ್ನ ತಾಯಿ ನನ್ನ ಅಜ್ಜಿ ಜೊತೆ ವಾಸವಿದ್ದರು ಆದರೆ ಘಟನೆ ನಡೆದ ಕಾಲಕ್ಕೆ ಅವರು ವಾಕಿಂಗ್ ಹೋಗಿದ್ದರು ಎಂದು ಗೊತ್ತಾಗಿತ್ತು. ನನ್ನ ಅಜ್ಜಿ ಮರಣಹೊಂದಿದ ಬಳಿಕ ನಾನು ಮೈಸೂರಿಗೆ ಬಂದು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿ ಅವರ ಶವವನ್ನು ನೋಡಿದ್ದೆ. ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನನ್ನ ಅಜ್ಜಿಯ ಶವ ಮಹಜರ್ ಮಾಡಿದ್ದರು. ಆ ಕಾಲಕ್ಕೆ ನಾನು, ರಮ್ಯ, ಶ್ರೀಕಾಂತ್, ಹರೀಶ್ ಹಾಜರಿದ್ದೆವು. ಆ ಕಾಲಕ್ಕೆ ನಾನು ಹೇಳಿಕೆ ಕೊಟ್ಟಿದ್ದೆ. ಬಾಯಿಗೆ ಬಟ್ಟೆ ತುರುಕಿದ್ದರಿಂದ ಅವರ ಗಂಟಲಿನಲ್ಲಿ infection ಆಗಿ ಮರಣಹೊಂದಿದ್ದಾರೆ ಎಂದು ವೈದ್ಯರು ತಿಳಿಸಿದ್ದರು. ಘಟನೆ ನಡೆದ ದಿನವೇ ನನ್ನ ಅಜ್ಜಿ ಬಾಯಿಗೆ ಬಟ್ಟೆ ತುರುಕಿ ಬಳೆಗಳನ್ನು ಕಿತ್ತುಕೊಂಡ ವ್ಯಕ್ತಿ ರೆಹಮಾನ್ ಷರೀಫ್ ಎಂದು ನನಗೆ ಗೊತ್ತಾಗಿತ್ತು. ಈಗ ರಮ್ಯ ಮತ್ತು ಶ್ರೀಕಾಂತ್ ವಿದೇಶದಲ್ಲಿದ್ದಾರೆ. ಹರೀಶ್ ಬೆಂಗಳೂರಿನಲ್ಲಿದ್ದಾರೆ. ಶವ ಮಹಜರ್ ಗೆ ನಾನು, ರಮ್ಯ ಮತ್ತು ಶ್ರೀಕಾಂತ್ ಸಹಿ ಮಾಡಿದ್ದೇವೆ. ಶ್ರೀಕಾಂತ್ ಮತ್ತು ರಮ್ಯ ಇವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಶವ ಮಹಜರ್ ಮೇಲಿನ ಸಹಿಗಳು ರಮ್ಯ ಮತ್ತು ಶ್ರೀಕಾಂತ್ ಇವರ ಸಹಿಗಳು ಇವೆ. ಸದರಿ ಶವ ಮಹಜರ್ ಅನ್ನು ನಿ.ಪಿ-*15* ಮತ್ತು ಸಹಿಗಳನ್ನು ಅನುಕ್ರಮವಾಗಿ ನಿ.ಪಿ-*15(ಎ), 15(ಬಿ)* ಎಂದು ಗುರುತಿಸಿದೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಆರ್.ಎಸ್.ಎಸ್ ರವರಿಂದಃ-</u>

*2.* ಘಟನೆ ದಿನ ಘಟನೆ ಕುರಿತು ನನ್ನ ಅಜ್ಜಿ ಮತ್ತು ತಾಯಿ ಪೋನ್ ಮಾಡಿ ನನಗೆ ತಿಳಿಸಿದ್ದರು. ನನ್ನ ಅಜ್ಜಿಗೆ *85-86* ವರ್ಷ ವಯಸ್ಸಾಗಿತ್ತು. ಅವರಿಗೆ ಯಾವುದೇ ಆರೋಗ್ಯದ ತೊಂದರೆಗಳು ಇರಲಿಲ್ಲ. ಅವರ ಮರಣವಾದ ಬಗ್ಗೆ ಗೊತ್ತಾದ ಬಳಿಕ ನಾನು ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿ ಎಲ್ಲಾ ವಿಷಯ ತಿಳಿದುಕೊಂಡಿದ್ದೆ. ನನ್ನ ಅಜ್ಜಿ ಆ ಘಟನೆಗಿಂತ ಮೊದಲು ಬೇರೆ

ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ನನ್ನ ಹೇಳಿಕೆಯನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಪಡೆದಿದ್ದಾರೆ. ನಿ.ಪಿ-*15* ದಾಖಲೆಯಲ್ಲಿ ನನ್ನ ಸಹಿ ಇಲ್ಲ. ದಿಃ*24.08.2019* ರ ಮದ್ಯಾಹ್ಣ ಶವ ಗುರುತಿಸುವ ಬಗ್ಗೆ ನನ್ನ ಸಹಿ ಪಡೆದಿದ್ದರು. ದಿಃ***23.08.2019*** ರಂದು ರಾತ್ರಿ ನನ್ನ ಅಜ್ಜಿ ಮರಣಹೊಂದಿದ್ದಾರೆ ಮತ್ತು ಅದೇ ದಿನ ರಾತ್ರಿ ನಾನು ಮೈಸೂರಿಗೆ ಬಂದಿದ್ದೆ. ನನ್ನ ಅಜ್ಜಿ ಮತ್ತು ಅಮ್ಮ ಕಳ್ಳತನ ಮಾಡಿದ್ದ ವ್ಯಕ್ತಿ ರೆಹಮಾನ್ ಷರೀಫ್ ಎಂದು ಹೇಳಿದ್ದರು. ಅವರೇ ಎಂದು ಅವರಿಗೆ ಹೇಗೆ ಗೊತ್ತಾಗಿತ್ತು ಎಂದು ನನಗೆ ಹೇಳಿಲ್ಲ. ಪೊಲೀಸರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಅವರ ಸಹೋದರರ ನಡುವೆ ಆಸ್ತಿಯ ಕುರಿತು ವ್ಯಾಜ್ಯ ಇದೆ ಎಂದರೆ ನಿಜ.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು